**314/2017**

ಶಶಿಕುಮಾರ
**ಪಿ.ಡಬ್ಲ್ಯೂ-2**

**ದಿನಾಂಕ 07.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಎ ಎಲ್ ಎಸ್ **ವಕೀಲರವರಿಂದ:**

ನನಗೆ ವಾದಿಯು 4-5 ವರ್ಷಗಳಿಂದ ಪರಿಚಯ. ವಾದಿಯ ತಂದೆ ನನಗೆ ಪರಿಚಯವಿರುವುದಿಲ್ಲ. ವಾದಿಯ ಎಲ್ಲಾ ಪತ್ರ ವ್ಯವಹಾರಗಳನ್ನು ನಾನೇ ಮಾಡುತ್ತೇನೆ ಎಂದರೆ ಸರಿಯಲ್ಲ.

2. ನಿಪಿ-1 ಕ್ರಯದ ಕರಾರು ಪತ್ರ ಗಣಕೀಕರಣ ಮಾಡುವಾಗ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಮತ್ತು ವಾದಿ ಹಾಜರಿದ್ದರು. ಸದರಿಯವರು ನನ್ನ ಕಚೇರಿಗೆ ಬಂದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಮಾತುಕತೆಯಾಗಿರುವುದಿಲ್ಲ, ಮೊದಲೇ ಅವರು ಮಾತುಕತೆ ಮಾಡಿಕೊಂಡು ಬಂದಿರುತ್ತಾರೆ. ಪ್ರತಿವಾದಿಯರು ಸಾಲ ತೀರಿಸುವ ಸಲುವಾಗಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ನಿಪಿ-1 ಕ್ರಯದ ಕರಾರು ಪತ್ರ ಬರೆಯಲು ಮಾಹಿತಿಯನ್ನು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ನೀಡಿರುತ್ತಾರೆ. ಕುಟುಂಬದವರು ಎಂದರೆ ಅವರ ಹೆಂಡತಿ ಮಕ್ಕಳು ಆಗಿರುತ್ತಾರೆ, ಅವರ ಹೆಸರುಗಳು ನನಗೆ ಗೊತ್ತಿಲ್ಲ. ನಿಪಿ-1 ಪತ್ರ ಬರೆದ ದಿನವೇ ಪ್ರತಿವಾದಿಯರು ನನಗೆ ಮಾಹಿತಿ ನೀಡಿರುತ್ತಾರೆ. ಕ್ರಯದ ಮೊತ್ತ ರೂ 4,20,000/- ಮಾತುಕತೆಯಾಗಿರುತ್ತದೆ. ನಿಪಿ-1 ದಾಖಲೆಯ ಸಮಯದಲ್ಲಿ ರೂ 4,00,000/- ನ್ನು ವಾದಿ ಪ್ರತಿವಾದಿಗೆ ಕೊಟ್ಟಿರುತ್ತಾರೆ. ವಾದಿ ರೂ 500 ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುತ್ತಾರೆ, ಎಷ್ಟು ನೋಟುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾರಾಯಣಗೌಡರು 1 ನೇ ಪ್ರತಿವಾದಿಗೆ ಹಣವನ್ನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ನಿಪಿ-1 ದಾಖಲೆ ನೊಂದಾವಣೆಯಾದ ನಂತರ ಕೊಟ್ಟಿರುತ್ತಾರೆ. ಹಣವನ್ನು ನೀಡುವಾಗ ಸಾಕ್ಷಿದಾರರು ಇದ್ದರು, ಅವರ ಹೆಸರುಗಳು ಈಗ ನೆನಪಿಲ್ಲ. ಸಾಕ್ಷಿದಾರರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಜಮೀನಿನ ವ್ಯವಹಾರದಲ್ಲಿ ಸೇರಿರುತ್ತಾರೆ ಇಲ್ಲವೋ ನನಗೆ ಗೊತ್ತಿಲ್ಲ.

3. ನಿಪಿ-1 ಕ್ರಯದ ಕರಾರು ಪತ್ರ ಬರೆಯುವ ಪೂರ್ವದಲ್ಲಿ ಸ್ವತ್ತಿನ ಪಹಣಿ ಪತ್ರ ಮತ್ತು ಎಂ ಆರ್ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಕ್ರಯದ ಕರಾರು ಪತ್ರದ ಸಮಯದಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆಯ ಬೆಲೆ ಎಷ್ಟು ಇತ್ತು ಎಂದು ನನಗೆ ಈಗ ನೆನಪಿಲ್ಲ.

ದಾವಾ ಸ್ವತ್ತು ಪಾಂಡವಪುರದಿಂದ ಒಂದುವರೆ ಕಿ ಮೀ ದೂರದಲ್ಲಿದೆ ಎಂದರೆ ಸರಿ. ದಾವಾ ಸ್ವತ್ತುಎ 1 ಗುಂಟೆಗೆ ರೂ 1.5 ಲಕ್ಷ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಯರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಪ್ರತಿವಾದಿಯರ ವಂಶವೃಕ್ಷವನ್ನು ಪಡೆದು ಅವರ ಕುಟುಂಬದ ಎಲ್ಲಾ ಸದಸ್ಯರ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಕ್ರಯದ ಕರಾರು ಪತ್ರವಾದ ಕಾರಣ ಕುಟುಂಬದ ವಂಶವೃಕ್ಷ ಪಡೆಯಲು ಅವಶ್ಯಕತೆ ಇರಲಿಲ್ಲ.

4. ಪ್ರತಿವಾದಿಗಳು ನನಗೆ 12 ವರ್ಷಗಳಿಂದ ಪರಿಚಯ. ಪತ್ರ ವ್ಯವಹರಣೆಗಳನ್ನು ಪ್ರತಿವಾದಿಯರು ನನ್ನ ಬಳಿ ಮಾಡಿಸುತ್ತಿದ್ದರು, ಆ ರೀತಿಯಾಗಿ ನನಗೆ ಅವರ ಪರಿಚಯವಾಯಿತು. ಪ್ರತಿವಾದಿಯರ ಈ ಪತ್ರ ವ್ಯವಹಾರವನ್ನು ಹೊರತುಪಡಿಸಿ ಬೇರೆ ಪತ್ರ ವ್ಯವಹಾರ ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತಿನ ತತ್ಕಾಲ ಪೋಡಿ ಆಗಿರುವುದಿಲ್ಲ, ಆದ ಕಾರಣ 1 ನೇ ಪ್ರತಿವಾದಿ 35 ತಿಂಗಳು ಸಮಯಾವಕಾಶ ಬೇಕು ಎಂದು ಕೇಳಿರುತ್ತಾರೆ. ತತ್ಕಾಲ ಪೋಡಿ ಯಾವ ಕಾರಕ್ಕಾಗಿ ಬೇಕಾಗಿತ್ತು ಎಂದರೆ ಸಾಕ್ಷಿ ಜಮೀನುಗಳು ನೊಂದಣಿಯಾಗುತ್ತಿರಲಿಲ್ಲ, ಆದಕಾರಣ ತತ್ಕಾಲ ಪೋಡಿ ಬೇಕಾಗಿತ್ತು. ಸದರಿ ವಿಚಾರವನ್ನು ನಿಪಿ-1 ದಾಖಲೆಯಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ಬರೆದಿರುವುದಾಗಿ ತೋರಿಸಿದರು.

5. ದಾವಾ ಸ್ವತ್ತಿನ ಎಲ್ಲಾ ದಾಖಲೆಗಳು ಸರಿಯಿದ್ದವು, ನಿಪಿ-1 ದಾಖಲೆಯು ಪ್ರತಿವಾದಿಯರು ವಾದಿಯಿಂದ ಪಡೆದ ಸಾಲದ ಭದ್ರತೆಗಾಗಿ ಮಾತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಪ್ರತಿವಾದಿಯರು ನಿಪಿ-1 ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ, ಆದರೆ ವಾದಿಯು ಸಾಲವನ್ನೇ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯಲ್ಲಿ ಯಾವುದೇ ಸಾಕ್ಷಿದಾರರು ಸಹಿ ಮಾಡಿರುವುದಿಲ್ಲ, ನಾವು ದಾಖಲೆಯನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ವಾದಿ ಪರ ಮುಂದುವರಿದ ವಿಚಾರಣೆಗೆ ಸಮಯಾವಕಾಶ ನೀಡಲಾಗಿದೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ